ಚೀನಾದ 'ಚಾಂಗಿ 5' ರೋಬಾಟ್ ನೌಕೆ ಕಳೆದ ಡಿ. 1ರಂದು ಚಂದ್ರನ ಅಂಗಳದಲ್ಲಿ ಇಳಿದಿದೆ. ಈ ನೌಕೆ ಸುಮಾರು 2 ಕಿಲೋ ಕಲ್ಲು–ಮಣ್ಣು ಸಂಗ್ರಹಿಸಿದೆ. ಈ ಮೂಲಕ ಬಾಹ್ಯಾಕಾಶ ಕ್ಷೇತ್ರದಲ್ಲಿ ತಾನೊಬ್ಬ ಪ್ರಮುಖ ಆಟಗಾರ ಎನ್ನುವ ಸಂದೇಶವನ್ನು ಚೀನಾ ನೀಡಿದೆ. ಚೀನಾದ ಈ ನಡೆ ಅಮೆರಿಕ, ಭಾರತ ಸೇರಿದಂತೆ ಬಾಹ್ಯಾಕಾಶ ಕ್ಷೇತ್ರದಲ್ಲಿನ ಇತರ ಪ್ರಮುಖ ಆಟಗಾರರ ನಿದ್ದೆ ಕೆಡಿಸಿದೆ. ಹಾಗಾದರೆ, 'ಚೀನಾದ ಚಂದ್ರಾಯಣ'ದ ನಿಜವಾದ ಹಕೀಕತ್ತೇನು?

■ ಡಾ. ಬಿ. ಆರ್. ಗುರುಪ್ರಸಾದ್

'ಬಿರುಗಾಳಿಗಳ ಸಾಗರ' (ಓಷನ್ ಆಫ್ ಸ್ಟಾರ್ಮ್ಸ್).

ಈ ಡಿಸೆಂಬರ್ 1ರಂದು 'ಚಾಂಗಿ 5' ಎಂಬ ನಾಲ್ಕು ಕಾಲುಗಳುಳ್ಳ ಒಂದು ರೋಬಾಟ್ ನೌಕೆ 'ಬಿರುಗಾಳಿಗಳ ಸಾಗರ' ಹೆಸರಿನ ಪ್ರದೇಶದ ಮೇಲೆ ಒಂದೆಡೆ ನಿಧಾನವಾಗಿ ಹೆಲಿಕಾಪ್ಟರ್‌ನಂತೆ ಇಳಿಯಿತು. ಕೆಲಕಾಲದ ನಂತರ ಅದರ ಒಂದು ಪಾರ್ಶ್ವದಿಂದ ಕೆಳಗಿಳಿದ ಯಾಂತ್ರಿಕ ತೋಳಿನ 'ಬೈರಿಗೆ' (ಡ್ರಿಲ್) ಇಳಿದ ಪ್ರದೇಶದ ಮಣ್ಣನ್ನು ಕೊರೆಯಲಾರಂಭಿಸಿತು. ಆ ಬಳಿಕ ಅಗೆದ ಮಣ್ಣನ್ನು ನೌಕೆಯ ಮೇಲ್ಭಾಗದಲ್ಲಿದ್ದ ಕೋಶವೊಂದಕ್ಕೆ ಯಾಂತ್ರಿಕ ತೋಳು ರವಾನಿಸಿದಂತೆ ಆ ಕೋಶದ ಮುಚ್ಚಳ ಗಾಳಿಯೂ ಪ್ರವೇಶಿಸದಷ್ಟು ಭದ್ರವಾಗಿ ಮುಚ್ಚಿಕೊಂಡಿತು.

ಶಾಂತ ಸಾಗರ (ಪೆಸಿಫಿಕ್ ಓಷನ್), ಹಿಂದೂ ಮಹಾಸಾಗರ (ಇಂಡಿಯನ್ ಓಷನ್), ಮುಂತಾದ ಹೆಸರುಗಳ ಪರಿಚಯವಿರುವ ನಮಗೆ ಇದನ್ನು ಓದಿದಾಗ ಈ 'ಬಿರುಗಾಳಿಗಳ ಸಾಗರ' ಎನ್ನುವುದು ಎಲ್ಲಿದೆ, ಅಲ್ಲಿ ನೀರಿನ ಬದಲು ಕಲ್ಲು ಮಣ್ಣು ಇರುವುದು ವಿಚಿತ್ರ, ಎನಿಸುತ್ತಿದೆಯೇ?

ಈ 'ಬಿರುಗಾಳಿಗಳ ಸಾಗರ' ಇರುವುದು ಚಂದ್ರನ ಮೇಲೆ. ಆದರೆ ಚಂದ್ರನ 'ಸಾಗರ, ಸಮುದ್ರ' ಪ್ರದೇಶಗಳಲ್ಲಿ ಭೂಮಿಯ ಮೇಲಿನ ಸಾಗರ ಸಮುದ್ರಗಳಂತೆ ನೀರಿಲ್ಲ. ಸುಮಾರು 400 ವರ್ಷಗಳ ಹಿಂದೆ ಚಂದ್ರನ ಮೇಲಿನ ಕಡು ಕಪ್ಪು ಬಣ್ಣದ ತಗ್ಗು ಪ್ರದೇಶಗಳನ್ನು ತಮ್ಮ ಪುಟ್ಟ ದೂರದರ್ಶಕಗಳಲ್ಲಿ (ಟೆಲಿಸ್ಕೋಪ್ಸ್) ಕಂಡ ಖಗೋಲಶಾಸ್ತ್ರಜ್ಞರು ಅವುಗಳನ್ನು ಸಾಗರ ಸಮುದ್ರಗಳಂತಹ ನೀರಿರುವ ಪ್ರದೇಶಗಳೆಂದು ಭ್ರಮಿಸಿ ಇಂತಹ ಚಿತ್ರ ವಿಚಿತ್ರ ಹೆಸರುಗಳನ್ನು ನೀಡಿದರು. ಚಾರಿತ್ರಿಕ ಕಾರಣದಿಂದಾಗಿ ಇಂದಿಗೂ ಆ ಹೆಸರುಗಳೇ ಉಳಿದುಕೊಂಡಿವೆ.

ಹೀಗೆ 'ಬಿರುಗಾಳಿಗಳ ಸಾಗರ'ದ ಮೇಲೆ ಚಂದ್ರನ ಅಮೂಲ್ಯವಾದ ಕಲ್ಲು ಮಣ್ಣುಗಳನ್ನು ಸಂಗ್ರಹಿಸಿಕೊಂಡ ನಂತರ 'ಚಾಂಗಿ 5' ನೌಕೆಯ ಮೇಲ್ಭಾಗ, ಕೆಳಭಾಗವನ್ನು ಉಡಾವಣಾ ವೇದಿಕೆಯಂತೆ ಬಳಸಿಕೊಂಡು ಮೇಲೇರಿತು. ಬಳಿಕ ಚಂದ್ರನನ್ನು ಸುತ್ತುಹಾಕುವ ನಡುವೆ ಅದು ಚಂದ್ರ ಕಕ್ಷೆಯಲ್ಲಿದ್ದ ತನ್ನ ಮಾತೃನೌಕೆಯನ್ನು ಕೂಡಿಕೊಂಡು ಇದೀಗ ಭೂಮಿಯತ್ತ ತನ್ನ ಪಯಣವನ್ನಾರಂಭಿಸಲು ಸಿದ್ಧವಾಗಿದೆ.

ಇನ್ನು ಕೆಲವೇ ದಿನಗಳಲ್ಲಿ ಅದು ಭೂಮಿಯನ್ನು ಸಮೀಪಿಸಿದಂತೆ ಚಂದ್ರನ ಕಲ್ಲುಮಣ್ಣುಗಳಿದ್ದ ಕೋಶ ನೌಕೆಯಿಂದ ಬೇರ್ಪಟ್ಟು ಭೂಮಿಯ ವಾತಾವರಣವನ್ನು ಮರುಪ್ರವೇಶಿಸಿ ದೇಶವೊಂದರಲ್ಲಿ ಇಳಿಯಲಿದೆ.

ಅದಾವ ದೇಶ ಗೊತ್ತೇ? ಅಂತರಿಕ್ಷದ ಅಂಗಳಕ್ಕೆ ಮೊದ ಮೊದಲು ಕಾಲಿಟ್ಟ ರಷ್ಯಾವಲ್ಲ, ನಂತರದ ಅಮೆರಿಕವೂ ಅಲ್ಲ, ಅದು ಚೀನಾ!



ಕಲ್ಲುಮಣ್ಣುಗಳನ್ನು ಸಂಗ್ರಹಿಸಿಕೊಂಡು ಚಂದ್ರನ ನೆಲದಿಂದ ಮೇಲೇರುತ್ತಿರುವ 'ಚಾಂಗಿ 5' ನೌಕೆಯ ಒಂದು ಭಾಗ.
ಚಿತ್ರ ಕೃಪೆ: ಚೀನಾದ ಅಂತರಿಕ್ಷ ಸಂಸ್ಥೆ ಸಿ.ಎನ್.ಎಸ್.ಎ.


